ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 66

ಸದಸ್ಯರ ಹೆಸರು : ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 09.07.2018.

ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು (ಭಾರಿ ಮತ್ತು ಮಧ್ಯಮ ನೀರಾವರಿ)

<table>
<tr><th>ಕ್ರ ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಗೋದಾವರಿ ಜಲಾನಯನಕ್ಕೆ ಸಂಬಂಧಿಸಿದಂತೆ ಬಚಾವತ್ ಆಯೋಗ ತೀರ್ಪು ನೀಡಿದ್ದು ಯಾವಾಗ; (ವಿವರ ನೀಡುವುದು).</td><td>ಗೋದಾವರಿ ಜಲಾನಯನಕ್ಕೆ ಸಂಬಂಧಿಸಿದಂತೆ ಬಚಾವತ್ ಆಯೋಗವು ನವೆಂಬರ್ 27, 1979 ರಂದು ತನ್ನ ಅಂತಿಮ ಆದೇಶದ ವರದಿಯನ್ನು ಹಾಗೂ ಮುಂದುವರೆದ ಆದೇಶದ ವರದಿಯನ್ನು ಜುಲೈ 07, 1980 ರಂದು ನೀಡಿರುತ್ತದೆ.</td></tr>
<tr><td>ಆ)</td><td>ಬಚಾವತ್ ಆಯೋಗದ ತೀರ್ಪಿನಂತೆ ಬೀದರ್ ಜಿಲ್ಲೆಗೆ ಹಂಚಿಕೆಯಾದ ನೀರಿನ ಪ್ರಮಾಣ ಎಷ್ಟು?</td><td>ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿ ಯೋಜನೆಗಳಿಂದ ಅಂದು ಬಳಕೆಯಾಗುತ್ತಿದ್ದ 4.6 ಟಿಎಂಸಿ ನೀರಿನ ಪ್ರಮಾಣದೊಂದಿಗೆ ಹೆಚ್ಚುವರಿಯಾಗಿ 17.77 ಟಿ.ಎಂ.ಸಿ. ನೀರನ್ನು ಗೋದಾವರಿ ಜಲ ವಿವಾದ ನ್ಯಾಯಾಧೀಕರಣದ (ಬಚಾವತ್ ನ್ಯಾಯಾಧೀಕರಣ) ತೀರ್ಪಿನಂತೆ ಹಂಚಿಕೆ ಮಾಡಲಾಗಿದೆ.

ಒಟ್ಟಾರೆ 22.37 ಟಿಎಂಸಿ ನೀರು ಕರ್ನಾಟಕ ರಾಜ್ಯಕ್ಕೆ ಹಂಚಿಕೆಯಾಗಿರುತ್ತದೆ.</td></tr>
<tr><td>ಇ)</td><td>ಬೀದರ್ ಜಿಲ್ಲೆಗೆ ಹಂಚಿಕೆಯಾದ ನೀರನ್ನು ಬಳಸಿಕೊಳ್ಳಲು ಯಾವ ಯಾವ ಯೋಜನೆ ರೂಪಿಸಲಾಗಿದೆ; (ಪ್ರತಿ ಯೋಜನೆಯ ನೀರು ಬಳಕೆ ಸಾಮರ್ಥ್ಯ ನಿರ್ಮಾಣ ವೆಚ್ಚ ಯೋಜನೆಯ ಸಧ್ಯದ ಮಾಹಿತಿ ನೀಡುವುದು)</td><td>ಗೋದಾವರಿ ನದಿ ಕಣಿವೆಯಲ್ಲಿ ಹಂಚಿಕೆಯಾಗಿರುವ ನೀರನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಸರ್ಕಾರವು ಈ ಕೆಳಕಂಡ ಯೋಜನೆಗಳನ್ನು ರೂಪಿಸಿದೆ.
<table>
<tr><th>ಕ್ರ ಸಂ</th><th>ಯೋಜನೆ ಹೆಸರು</th><th>ನೀರಿನ ಹಂಚಿಕೆ/ಬಳಕೆ (ಟಿ.ಎಂ.ಸಿ)</th><th>ಯೋಜನೆಯ ವೆಚ್ಚ (ರೂ.ಕೋಟಿಗಳಲ್ಲಿ)</th><th>ಯೋಜನೆಗಳ ಪ್ರಸ್ತುತ ಹಂತ</th></tr>
<tr><td>1</td><td>ಜೀರಗಿಹಾಳ ಬ್ರಿಡ್ಜ್ ಕಂ ಬ್ಯಾರೇಜ್</td><td>0.78</td><td>57.84</td><td>ಪೂರ್ಣಗೊಂಡಿದೆ</td></tr>
<tr><td>2</td><td>ಮಾಣಿಕೇಶ್ವರ ಬ್ರಿಡ್ಜ್ ಕಂ ಬ್ಯಾರೇಜ್</td><td>0.78</td><td>50.73</td><td>ಪೂರ್ಣಗೊಂಡಿದೆ</td></tr>
<tr><td>3</td><td>ಹಾಲಹಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್</td><td>2.46</td><td>104.27</td><td>ಪೂರ್ಣಗೊಂಡಿದೆ</td></tr>
<tr><td>4</td><td>ಚಂದಾಪುರ ಬ್ರಿಡ್ಜ್ ಕಂ ಬ್ಯಾರೇಜ್</td><td>0.78</td><td>58.66</td><td>ಪೂರ್ಣಗೊಂಡಿದೆ</td></tr>
<tr><td>5</td><td>ಕಾರಂಜಾ</td><td>9.3</td><td>611.13</td><td>ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.</td></tr>
<tr><td>6</td><td>ಚುಳುಕಿನಾಲಾ</td><td>1.17</td><td>74.48</td><td>ಪೂರ್ಣಗೊಂಡಿದೆ.</td></tr>
<tr><td>7</td><td>ಸಣ್ಣ ನೀರಾವರಿ ಯೋಜನೆಗಳು</td><td>7.1</td><td colspan="2">ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಿದೆ.</td></tr>
<tr><td></td><td>ಒಟ್ಟು</td><td>22.37</td><td></td><td></td></tr>
</table></td></tr>
<tr><td>ಈ)</td><td>ಹಂಚಿಕೆಯಾದ ನೀರಿನ ಪೈಕಿ ಎಷ್ಟು ನೀರನ್ನು ಬಳಸಿಕೊಳ್ಳಲು ಯೋಜನೆ ರೂಪಿಸಲಾಗಿದೆ; ಇನ್ನೂ ಎಷ್ಟು ಯೋಜನೆಗಳನ್ನು ರೂಪಿಸ ಬೇಕಾಗಿದೆ; (ವಿವರ ನೀಡುವುದು)</td><td>ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಸಂಬಂಧಿಸಿದಂತೆ, ಬೀದರ್ ಜಿಲ್ಲೆಯಡಿ ಗೋದಾವರಿ ಕಣಿವೆ ಮಾಂಜ್ರಾ ನದಿ ಪಾತ್ರದಡಿ 4.80 ಟಿಎಂಸಿ ನೀರಿನ ಬಳಕೆಗೆ 4 ಸರಣಿ ಬ್ರಿಡ್ಜ್ ಕಂ ಬ್ಯಾರೇಜನ್ನು ನಿರ್ಮಿಸಲಾಗಿರುತ್ತದೆ. ಸದರಿ 4 ಬ್ಯಾರೇಜುಗಳಡಿ ಸ್ಥಳೀಯ ಹಾಗೂ ತಾಂತ್ರಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಅಳವಡಿಸಿದ ಗೇಟುಗಳಿಗೆ Low Level Friction Dampers ಅಳವಡಿಸುವ ಒಟ್ಟು ರೂ.7.07 ಕೋಟಿ ಗುತ್ತಿಗೆ ಮೊತ್ತದ ಎರಡು ಪ್ಯಾಕೇಜ್ ಕಾಮಗಾರಿಗಳನ್ನು ಮಾರ್ಚ್ 2018ರಲ್ಲಿ ಕೈಗೆತ್ತಿಕೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಕರ್ನಾಟಕ ನೀರಾವರಿ ನಿಗಮಕ್ಕೆ ಸಂಬಂಧಿಸಿದಂತೆ, ಕಾರಂಜಾ ಯೋಜನೆಯಡಿಯಲ್ಲಿ 29227ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಇದುವರೆಗೂ 22606ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು, ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ 6621 ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಪ್ರಸಕ್ತ ಸಾಲಿನಲ್ಲಿ ಒದಗಿಸಲು ಯೋಜಿಸಲಾಗಿದೆ. ಮುಂದುವರೆದು, ಯೋಜನೆಗೆ ನೀರಿನ ಕೊರತೆಯನ್ನು ಸರಿದೂಗಿಸುವ ನಿಟ್ಟಿನಲ್ಲಿ ಮಾಂಜ್ರಾ ನದಿಯಿಂದ ನೀರೆತ್ತಿ ಕಾರಂಜಾ ಯೋಜನೆಯ ಕಾಲುವೆಗಳಿಗೆ ನೀರನ್ನು ಒದಗಿಸಲು ಈಗಾಗಲೇ ಎರಡು ಯೋಜನೆಗಳನ್ನು ರೂಪಿಸಲಾಗಿದೆ.

ಚುಳಕಿನಾಲಾ ಯೋಜನೆಯಡಿಯಲ್ಲಿ 4047 ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಚುಳಕಿನಾಲಾ ಯೋಜನೆಗೆ ಒಳಹರಿವು ಕಡಿಮೆಯಾಗಿರುವುದನ್ನು ಮನಗಂಡು ಸರ್ಕಾರವು ಮಾಂಜ್ರಾ ನದಿಯಿಂದ ನೀರನ್ನು ಎತ್ತಿ ಚುಳಕಿನಾಲಾ ಜಲಾಶಯಕ್ಕೆ ನೀರನ್ನು ಪೂರೈಸುವ ಯೋಜನೆಯನ್ನು ರೂಪಿಸಿದೆ.</td></tr>
</table>

ಸಂಖ್ಯೆ: ಜಸಂಇ 27 ಎಂಎಲ್ಎ 2018

[ಡಿ.ಕೆ.ಶಿವಕುಮಾರ್]

ಜಲಸಂಪನ್ಮೂಲ ಸಚಿ